SERVICE ABOVE SELF



Rotary

विश्वमित्र:

ವಿಶ್ವಮಿತ್ರ

VISHWAMITHRA

Weekly House Bulletin of Rotary Club Shimoga, R.I. Dist. 3182

Rotary THE MAGIC OF ROTARY 2024-25

Rtn. Stephanie A. Urchick
RI President 2024-25

| Rtn. CA Dev Anand | Rtn. K. Sooryanarayana Udpa | Rtn. N.G. Usha | Rtn. M. Madhavachar |
|---|---|---|---|
| District Governor 2024-25 | President, Mob: 99009 66114 | Secretary, Mob : 81975 92278 | Bulletin Editor, Mob: 98862 73495 |

We meet every Wednesday at 6.45p.m. at Rotary Youth Centre, Sowlanga Road, L.B.S.Nagar, Shivamogga- 577 204

ಸಂಪುಟ – 67 ಸಂಚಿಕೆ –05 ದಿನಾಂಕ : 07–08–2024

## ದಿನಾಂಕ: 07.08.2024 ರ ವಾರದ ಸಭೆಯ ವರದಿ

**ಪರಿಸರ ವೇದಿಕೆ – ದಿನಾಂಕ: 07.08.2024 ರಂದು ಪರಿಸರ ನಾಗರಾಜ್ ಎಂದೇ ಖ್ಯಾತಿ ಹೊಂದಿರುವ ಶ್ರೀ ಪರಿಸರ ನಾಗರಾಜ್‌ರವರು ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಪರಿಸರದ ಹಲವಾರು ಮಾಹಿತಿಗಳನ್ನು ನೀಡಿದರು. ಅಧ್ಯಕ್ಷ ರೊ.ಕೆ.ಸೂರ್ಯನಾರಾಯಣ ಉಡುಪರವರು ಮತ್ತು ಕಾರ್ಯದರ್ಶಿ ರೊ.ಎನ್. ಜಿ. ಉಷಾರವರು ವೇದಿಕೆಯಲ್ಲಿದ್ದರು.**







ಅಂದಿನ ಸಭೆಯ ಪ್ರಾರಂಭದಲ್ಲಿ ರೊ. ಶೋಭಾ ರುದ್ರೇಶ್‌ರವರು "ಶರಣು ಮಂಗಳ ಗೌರಿ ನಿರುತ ನಿನ್ನನು ಸ್ಮರಿಸುವ" ಎಂಬ ಹಾಡಿನೊಂದಿಗೆ ಪ್ರಾರ್ಥನೆ ಮಾಡಿದರು. ರೊ. ಅನುರಾಧ ಶೀರ್‍ನಾಳಿಯವರು ಸ್ವಾಗತ ಮಾಡಿದರು. ಟಾಕ್ ಆಫ್ ದಿ ಡೇ ಕಾರ್ಯಕ್ರಮದಲ್ಲಿ ರೊ.ಟಿ.ಕೆ.ಎಂ. ಭಟ್‌ರವರು ಮಾತನಾಡಿ, ಕ್ಲಬ್ ಮನುಷ್ಯನ ಶರೀರದ ಹಾಗೆ ಮತ್ತು ಅದು ಆತ್ಮ ಇದ್ದ ಹಾಗೆ ಅದನ್ನು ಉಳಿಸಿ ಬೆಳೆಸಿ ಎನ್ನುತ್ತಾ ಜುಲೈ ತಿಂಗಳಲ್ಲಿ ಶೇ 100% ಹಾಜರಾದ ಸದಸ್ಯರುಗಳ ಹೆಸರುಗಳನ್ನು ಪ್ರಕಟಿಸಿದರು. ಅಂದು ಸಭೆಯಲ್ಲಿದ್ದ ಸದಸ್ಯರುಗಳು ವೇದಿಕೆಗೆ ಆಗಮಿಸಿ ಬಹುಮಾನ ಪಡೆದರು. (ಶೇ100 ರ ಹಾಜರಾತಿ ಹೊಂದಿದ ಸದಸ್ಯರ ಪಟ್ಟಿ ಬೇರೆಡೆ ಪ್ರಕಟವಾಗಿದೆ.) ಸಹಾಯಕ ಗವರ್ನರ್ ರೊ.ಎಸ್. ಆರ್.ನಾಗರಾಜ್ ತಮ್ಮ ತಂಡದೊಂದಿಗೆ ಆಗಮಿಸಿ ಸದಸ್ಯತ್ವ ವಿಸ್ತರಣೆ ಅಭಿವೃದ್ಧಿ ಸೆಮಿನಾರ್‌ಗೆ ನೋಂದಣಿ ಮಾಡಿಸಿಕೊಳ್ಳಲು ಮನವಿ ಮಾಡಿದರು. ಇವರೊಂದಿಗೆ ರೊ.ಸರ್ಜಾ ಜಗದೀಶ್, ರೊ.ರವೀಂದ್ರನಾಥ್ ಐತಾಳ್, ರೊ.ನರಸಿಂಹ ಪ್ರಸಾದ್, ರೊ.ವೀರಣ್ಣ ಎ. ಹುಗ್ಗಿ ಜೊತೆಗಿದ್ದರು. ಕಾರ್ಯದರ್ಶಿ ರೊ.ಎನ್.ಜಿ.ಉಷಾರವರು ಪ್ರಕಟಣೆ ನೀಡಿದರು.ರೊ. ಸಿ. ವಿಜಯಕುಮಾರ್‌ರವರು ಮುಖ್ಯ ಅತಿಥಿಗಳ ಪರಿಚಯ ಮಾಡಿದರು.

ಮುಖ್ಯ ಅತಿಥಿಗಳಾದ ಶ್ರೀ ಪರಿಸರ ನಾಗರಾಜ್‌ರವರು ಮಾತನಾಡಿ, ಮಳೆ ನೀರಿನ ಕೊಯ್ಲು ಬಗ್ಗೆ ಎಲ್ಲೆಡೆಯೂ ಹೇಳುತ್ತಾರೆ. ಆದರೆ ಈಗ ತುಂಬಾ ಮಳೆ ಬರುತ್ತಿದೆ. ಮಳೆ ಕೊಯ್ಲು ಬೇಕಾ? ಎಂಬುದು ಎಲ್ಲರ ಪ್ರಶ್ನೆಯಾಗಿದೆ. ಆದರೆ ಮಳೆ ನೀರು ಭೂಮಿಯಲ್ಲಿ ಎಷ್ಟರ ಮಟ್ಟಿಗೆ ಇಂಗುತ್ತದೆ ಎನ್ನುವುದು ಇಲ್ಲಿ ಮುಖ್ಯವಾದ ಅಂಶವಾಗಿದೆ ಎಂದರು. ಈಗ ಹೋಂ ಸ್ಟೇ, ರೆಸಾರ್ಟ್‌ಗಳಿಂದ ಪರ್ವತ ಪ್ರದೇಶಗಳಲ್ಲಿ ಪ್ರಕೃತಿಗೆ ಹೊಡೆತವಾಗುವಂತಹ ಕಾರ್ಯಗಳು ಆಗುತ್ತಿದೆ. ಆದುದರಿಂದಲೇ ಭೂಕುಸಿತದಂತಹ ಅವಘಡಗಳು ಸಂಭವಿಸುತ್ತಿವೆ. ಹೋಂ ಸ್ಟೇ ಮತ್ತು ರೆಸಾರ್ಟ್‌ಗಳಂತಹವುಗಳ ನಿರ್ಮಾಣವನ್ನು ತಡೆಯಲು ಹಾಗೂ ತೆರವುಗೊಳಿಸಲು ಸರ್ಕಾರದ ಮೇಲೆ ನಾವುಗಳು ಒತ್ತಡವನ್ನು ಹಾಕಬೇಕಾಗಿದೆ. ಮುಂದಿನ ಪೀಳಿಗೆಯ ದೃಷ್ಟಿಯಿಂದ ಇದು ಒಳ್ಳೆಯದು. ಪ್ರಕೃತಿಗೆ ಏನು ಮಾಡಬೇಕೆಂದು ತಿಳಿದಿದೆ. ಸಾರ್ವಜನಿಕರು ಸರ್ಕಾರದ ಜೊತೆ ಕೈಜೋಡಿಸಿ, ಒಳ್ಳೆಯ ಕೆಲಸಗಳಿಗೆ ಸಹಕರಿಸಿ ಎಂದರು.

ಮಳೆ ಬಂದ ನೀರು ಎಲ್ಲಿ ಹೋಗುತ್ತಿದೆ ಎಂದು ಪ್ರಶ್ನಿಸಿದ ಅವರು, ನದಿ, ಕೆರೆ, ಬಾವಿ ಮತ್ತು ಕಾಡು ಚೆನ್ನಾಗಿರಬೇಕಾದಲ್ಲಿ ನೀರು ಅವಶ್ಯಕ. ಮಾನವರಿಂದ ಮಾಡಿದ ತಪ್ಪಿಗೆ ಉದಾಹರಣೆ (ಗಣಿಗಾರಿಕೆಯಿಂದ) ಲ್ಯಾಂಡ್ ಸ್ಲೈಡ್ ನಂತಹ ಅವಘಡಗಳಾಗುತ್ತಿವೆ. ಮರಗಳು ಪರ್ವತ ಪ್ರದೇಶಗಳಲ್ಲಿ ಆಳವಾಗಿ ತನ್ನ ಬೇರುಗಳನ್ನು ಬಿಟ್ಟು ನೀರು ಅಲ್ಲಿಯವರೆಗೂ ತಲುಪುವಂತೆ ಮಾಡುತ್ತವೆ. ಆದುದರಿಂದ ಲ್ಯಾಂಡ್ ಸ್ಲೈಡ್‌ನಂತಹ ಅವಘಡಗಳಾಗುವುದು ಕಡಿಮೆ. ಅಭಿವೃದ್ಧಿ ನೆಪದಲ್ಲಿ ಕೆರೆ, ಗೋಮಾಳ ಹಾಳು ಮಾಡಲಾಗುತ್ತಿದೆ. ಆದುದರಿಂದ ತಾವುಗಳು ಸಮಯವೊದಗಿದಾಗ ಸರ್ಕಾರಕ್ಕೆ ಪತ್ರ ಬರೆಯಿರಿ. ರೈತರು ಶಕ್ತರಾಗದ ಹೊರತು ಅಭಿವೃದ್ಧಿ ಇಲ್ಲ. ಇಂದಿನ ದಿನಗಳಲ್ಲಿ ಸ್ವಾಭಾವಿಕ ಅರಣ್ಯಗಳು ಕೂಡ ಕಣ್ಮರೆಯಾಗುತ್ತಿವೆ. ಇದರಿಂದ ಜೀವ ವೈವಿಧ್ಯ ಕಡಿಮೆಯಾಗುತ್ತಿದೆ. (ಅಡಿಕೆ ಮರಗಳನ್ನು ಬೆಳೆಯುವುದು ಅರಣ್ಯ

2ನೇ ಪುಟಕ್ಕೆ

## ಈ ವಾರದ ಸಭೆ

**ದಿನಾಂಕ : 14-08-2024 ಬುಧವಾರ** **ಸಂಜೆ 6:45**

### ಕ್ಲಬ್ ಅಸೆಂಬ್ಲಿ ಹಾಗೂ ಕ್ಲಾಸಿಫಿಕೇಶನ್ ಟಾಕ್

**ನಮ್ಮ ರೋಟರಿ ಕ್ಲಬ್ ಕಾರ್ಯಕಾರಿ ಮಂಡಳಿಯವರು ಹಾಗೂ ಎಲ್ಲಾ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ**

ಸ್ಥಳ: **ರೋಟರಿ ಯುವ ಕೇಂದ್ರ,** ಸವಳಂಗ ರಸ್ತೆ, ಶಿವಮೊಗ್ಗ

ಅಭಿವೃದ್ಧಿಯಲ್ಲ) ಈ ಬಗ್ಗೆ ಸಂಘ ಸಂಸ್ಥೆಗಳು ಧ್ವನಿ ಎತ್ತಬೇಕು ಎಂದು ಪರಿಸರ ನಾಗರಾಜ್ ತಿಳಿಸಿದರು.

ಶರಾವತಿ ನದಿಯು ಅಂಬುತೀರ್ಥದಲ್ಲಿ ಹುಟ್ಟಿ ಕೊನೆಗೆ ಹೊನ್ನಾವರದ ಸಮುದ್ರಕ್ಕೆ ಸೇರುತ್ತದೆ. ಅದರ ಉಳಿವಿಗಾಗಿ 2005 ರಲ್ಲಿ ಆ ನದಿಗಾಗಿ ಪಾದಯಾತ್ರೆಯನ್ನು ಕೈಗೊಳ್ಳಲಾಗಿತ್ತು. ಈಗ ಕೆಲವೆಡೆ ಅಕೇಶಿಯ ಪ್ಲಾಂಟೇಶನ್‌ಗಳನ್ನು ಮಾಡಲಾಗುತ್ತಿದೆ. ಇದರಿಂದ ಪ್ರಾಣಿ ಪಕ್ಷಿಗಳಿಗೆ ಉಪಯೋಗವಿಲ್ಲ. ಈ ಬಗ್ಗೆ ಸಾರ್ವಜನಿಕರಿಗೆ ತಿಳುವಳಿಕೆ ಮೂಡಿಸುವುದರ ಮೂಲಕ ಸ್ವಲ್ಪ ಮಟ್ಟಿಗೆ ರಕ್ಷಣೆಯಾಗುತ್ತಿದೆ. ಅದಕ್ಕಾಗಿ ನಾವು ಅಭಾರಿಗಳಾಗಬೇಕು.

ಸಾಲಿಡ್ ವೇಸ್ಟ್ ಮ್ಯಾನೇಜ್‌ಮೆಂಟ್ ಬಗ್ಗೆ ಮಾತನಾಡಿದ ಅವರು, ನಗರದ ಅನುಪಿನ ಕಟ್ಟೆಯಲ್ಲಿ ಶಿವಮೊಗ್ಗೆಯ ಎಲ್ಲಾ ಕಸಗಳನ್ನು ತಂದು ಹಾಕಲಾಗುತ್ತಿದೆ. ನೀವುಗಳು ಸಾರ್ವಜನಿಕರೊಂದಿಗೆ ಇಲ್ಲಿಗೆ ಭೇಟಿಕೊಡಿ. ಇದರಿಂದ ಆಂದೋಲನ, ಅವೇರ್‌ನೆಸ್ ಆಗಬೇಕು. ಅಲ್ಲಿ ಘನ ತ್ಯಾಜ್ಯಗಳಲ್ಲಿ ಪೇಪರ್ ಕಪ್‌ಗಳು, ಪ್ಲಾಸ್ಟಿಕ್ ಕಪ್‌ಗಳು ಇವೆ. ಈಗ ಬಿಸಿ ಬಿಸಿ ಪದಾರ್ಥಗಳನ್ನು ಪ್ಲಾಸ್ಟಿಕ್‌ಗಳಲ್ಲಿ ತೆಗೆದುಕೊಂಡು ಹೋಗುತ್ತಿದ್ದಾರೆ. ಇದರಿಂದ ಕ್ಯಾನ್ಸರ್ ಬರುತ್ತದೆ. ಅಲ್ಲಿ ಘನ ತ್ಯಾಜ್ಯ ವಸ್ತುಗಳ ಗುಡ್ಡವಾಗಿದೆ. ಸಾರ್ವಜನಿಕರು ಸಹ ಈ ಬಗ್ಗೆ ತಿಳಿದುಕೊಳ್ಳಬೇಕಾಗಿದೆ. ಅಲ್ಲಿ ನೋಡಿದರೆ ತುಂಬಾ ನೋವಾಗುತ್ತದೆ. ಇಲ್ಲಿ ವೈಜ್ಞಾನಿಕವಾಗಿ ಕಸದ ನಿರ್ವಹಣೆಯಾಗಬೇಕಾಗಿದೆ.

ತುಂಗಾ ನದಿಗೆ ಕಲುಷಿತ ನೀರು ಹಾಗೂ ಇನ್ನಿತರೆ ವಸ್ತುಗಳು ಸೇರುತ್ತಿವೆ. ಅದಲ್ಲದೆ ಅದರದಡದಲ್ಲಿ (ದಂಡೆಯಲ್ಲಿ) ಸುಮಾರು 105 ಕೋಟಿ ಖರ್ಚು ಮಾಡಿ ವಾಕ್ ವೇ ನಿರ್ಮಿಸಿದ್ದಾರೆ. 50 ಕೋಟಿ ಖರ್ಚು ಮಾಡಿದ್ದರೂ ತುಂಗಾ ನದಿಗೆ ಕೊಳಚೆ ನೀರು ಸೇರುವುದನ್ನು ತಡೆಯಬಹುದಿತ್ತು ಎಂದರು. ಸರ್ಕಾರದಲ್ಲಿ ಬೇಕಾದಷ್ಟು ದುಡ್ಡು ಇದೆ. ಖರ್ಚು ಮಾಡಿ ನೀರನ್ನು ಶುಚಿಗೊಳಿಸಬಹುದು. ಸಾಲಿಡ್ ವೇಸ್ಟ್ ಮ್ಯಾನೇಜ್‌ಮೆಂಟ್ ಬಗ್ಗೆಯೂ ಸರ್ಕಾರಕ್ಕೆ ತಿಳಿಸಬಹುದು ಎಂದರು.

ಆದರೆ ನಮ್ಮ ನಮ್ಮ ಮನೆಯಿಂದ ಕಸದ ಉತ್ಪತ್ತಿ ಕಡಿಮೆ ಮಾಡಬೇಕು. ಒಮ್ಮೆ ಮಾತ್ರ ಬಳಸುವ ಪ್ಲಾಸ್ಟಿಕ್ (ಸಿಂಗಲ್ ಯೂಸ್) ಬಳಕೆ ಕಡಿಮೆ ಮಾಡಬೇಕು. ಆ ತರಹೆಯ ಪ್ಲಾಸ್ಟಿಕ್‌ಗಳ ತಯಾರಿಕೆಯನ್ನೇ ತಡೆಯಬೇಕು. ಈ ಬಗ್ಗೆ ರೋಟರಿಯಂತಹ ಸಂಸ್ಥೆಗಳಿಂದ ಸರ್ಕಾರಕ್ಕೆ ಒತ್ತಡವನ್ನು ಹಾಕಬೇಕು. ಇದರಿಂದ ಜೀವ ಉಳಿಯುತ್ತದೆ. ವೈವಿಧ್ಯಮಯ ಪ್ರಾಣಿ ಪಕ್ಷಿಗಳು ಉಳಿಯುತ್ತದೆ ಎಂದರು. ಈ ಬಗ್ಗೆ ಶಾಲಾ ಕಾಲೇಜುಗಳಲ್ಲಿ ಮಕ್ಕಳಿಗೆ ತರಬೇತಿ ನೀಡಬೇಕು. ನಾವುಗಳು ಕಾಫಿ, ಟೀ ಬದಲಾಗಿ ಹಣ್ಣುಗಳನ್ನು ಸೇವಿಸೋಣ. ನಮ್ಮ ಆರೋಗ್ಯದ ಬಗ್ಗೆ ನಮಗೆ ಕಾಳಜಿಯಿರಲಿ. ಗೋಮಾಳ, ಕೆರೆಗಳನ್ನು ಉಳಿಸೋಣ. ಕೆರೆಗಳ ನಿರ್ಮಾಣಕ್ಕೆ ಕಾನೂನಾತ್ಮಕವಾಗಿ ಸಹಕಾರವಿದೆ. ಇದಕ್ಕಾಗಿ ಸಾರ್ವಜನಿಕರು ಹಕ್ಕೊತ್ತಾಯ ಮಾಡಬೇಕು ಎಂದರು.

ರೊ. ಹೆಚ್.ಎಸ್. ಮೋಹನ್‌ರವರು ಮಾತನಾಡಿ, ಮಣ್ಣು ಕುಸಿತಕ್ಕೆ ಪಶ್ಚಿಮ ಘಟ್ಟಗಳ ಪ್ರದೇಶದಲ್ಲಿ ಅವಕಾಶವಾಗಿಲ್ಲ. ಏಕೆಂದರೆ ಇಲ್ಲಿ ಯಾವುದೇ ಗಣಿಗಾರಿಕೆಯಾಗಲಿ, ಹೋಂ ಸ್ಟೇಗಳಿಲ್ಲವಾದ್ದರಿಂದ ಲ್ಯಾಂಡ್ ಸ್ಲೈಡ್ ಕಡಿಮೆ ಎಂದರು. ಆದರೆ ರಸ್ತೆಗಳನ್ನು ಅವೈಜ್ಞಾನಿಕವಾಗಿ ಮಾಡಿದ್ದಾರೆ ಎಂದರು. ರೊ. ಕಿಶೋರ್ ಶೀರನಾಳಿಯವರು ಮೇಗರವಳ್ಳಿ ಮತ್ತಿತರ ಪ್ರದೇಶಗಳಲ್ಲಿ ರಸ್ತೆ ಅಗಲೀಕರಣದ ಬಗ್ಗೆ ಮಾತನಾಡಿದರು. ಇದಕ್ಕೆ ಪ್ರತಿಕ್ರಿಯಿಸಿದ ಮುಖ್ಯ ಅತಿಥಿಗಳು ಕಿಂಗ್‌ಕೋಬ್ರಾದಂತಹ ಹಾವುಗಳು ಆಗುಂಬೆಯಂತಹ ಅರಣ್ಯ ಪ್ರದೇಶಗಳಲ್ಲಿರುವುದರಿಂದ ಕಾಡು ಉಳಿದಿದೆ ಎಂದರು. ಅದಕ್ಕೆ ಸರ್ಕಾರ ಯೋಜನೆ, ಯೋಚನೆ ಮಾಡಬೇಕು. ನಾವು ಕಳೆದ 20 ವರ್ಷಗಳಿಂದ 150 ವರ್ಷಗಳಷ್ಟು ಹಿಂದಕ್ಕೆ ಸಾಗಿದ್ದೇವೆ. ಹೊನ್ನಾಳಿಯಂತಹ ಪ್ರದೇಶದ ಕೆರೆಗಳಲ್ಲಿ ನೀರಿಲ್ಲ ಎಂದು ರೊ.ದೀಪಕ್ ಕುಮಾರ್‌ರವರು ತಿಳಿಸಿದರು. ಇವೆಲ್ಲಕ್ಕೂ ನಾವುಗಳು ಸರ್ಕಾರಕ್ಕೆ ಹಕ್ಕೊತ್ತಾಯ ಮಾಡಬೇಕು ಎಂದು ತಿಳಿಸಿದ ಮುಖ್ಯ ಅತಿಥಿಗಳು ತಮಗೆ ಈ ವೇದಿಕೆಯಲ್ಲಿ ಪರಿಸರದ ಬಗ್ಗೆ ವಿಚಾರಗಳನ್ನು ಹಂಚಿಕೊಳ್ಳುವುದಕ್ಕೆ ಅವಕಾಶ ನೀಡಿದ್ದಕ್ಕೆ ಮುಖ್ಯ ಅತಿಥಿ ಶ್ರೀ ಪರಿಸರ ನಾಗರಾಜ್‌ರವರು ಧನ್ಯವಾದ ತಿಳಿಸಿ ಪರಿಸರ ಸಂರಕ್ಷಣೆಯ ಬಗ್ಗೆ ಚಿಂತನೆಯಾಗಬೇಕು ಎಂದರು.

ಅಧ್ಯಕ್ಷರಾದ ರೊ.ಕೆ.ಸೂರ್ಯನಾರಾಯಣ ಉಡುಪರು ಮಾತನಾಡಿ, ಇಂದಿನ ಮುಖ್ಯ ಅತಿಥಿಗಳಾದ ಶ್ರೀ ಪರಿಸರ ನಾಗರಾಜ್‌ರವರು ಪರಿಸರದ ಜ್ವಲಂತ ಸಮಸ್ಯೆಗಳ ಬಗ್ಗೆ ಬೆಳಕು ಚೆಲ್ಲಿದ್ದಾರೆ. ಬಹಳ ವರ್ಷಗಳಿಂದ ಈ




ಸಮಸ್ಯೆಗಳು ಇದೆ. ಈ ಬಗ್ಗೆ ಸರ್ಕಾರಕ್ಕೆ ಮನವಿ ಮಾಡಿ ಪರಿಹಾರ ಕಂಡುಕೊಳ್ಳಬೇಕಾಗಿದೆ ಎಂದರು.

ರೊ.ಪಿಡಿಜಿ. ಡಾ. ಆರ್.ಡಿ. ಪ್ರಭುರವರು ನವಿಲೆ ಕೆರೆಯ ಬಗ್ಗೆ ಮಾತನಾಡಿದರು. ಆದರೆ ಬೆಂಗಳೂರಿನ ಜೆ.ಪಿ. ನಗರದ ಹತ್ತಿರವಿರುವ ಕೆರೆಯೊಂದು ಒಳ್ಳೆಯ ಅಭಿವೃದ್ಧಿ ಕಂಡಿರುವ ಬಗ್ಗೆ ಮಾತನಾಡಿ, ಈಗ ಅದರ ಸುತ್ತಲೂ ನಡಿಗೆಗಾಗಿ ವಾಕಿಂಗ್ ಪಾಥ್ ಮಾಡಿ, ಕೆರೆಯ ಸುತ್ತಲೂ ಬೇಲಿ ನಿರ್ಮಿಸಿ, ಕೆರೆಯ ನೀರು ದುರ್ಬಳಕೆಯಾಗದಂತೆ ತಡೆದಿದ್ದರಿಂದ ಅಂತರ್ಜಲ ಹೆಚ್ಚಾಗಿರುವುದರ ಬಗ್ಗೆ ಮಾಹಿತಿ ನೀಡಿದರು.

ಮುಖ್ಯ ಅತಿಥಿಗಳಾದ ಶ್ರೀ ಪರಿಸರ ನಾಗರಾಜ್‌ರವರಿಗೆ ರೊ.ಪಿಡಿಜಿ. ಡಾ.ಆರ್.ಡಿ. ಪ್ರಭು, ರೊ.ಕಿಶೋರ್ ಶೀರನಾಳಿಯವರು ಅಧ್ಯಕ್ಷ ಕಾರ್ಯದರ್ಶಿಯವರೊಂದಿಗೆ ಸೇರಿ ಸನ್ಮಾನಿಸಿ ನೆನಪಿನ ಕಾಣಿಕೆ ನೀಡಿದರು. ಕೊನೆಯಲ್ಲಿ ಕಾರ್ಯದರ್ಶಿ ರೊ.ಎನ್. ಜಿ. ಉಷಾರವರು ವಂದನಾರ್ಪಣೆ ಮಾಡಿದರು. ರಾಷ್ಟ್ರಗೀತೆಯೊಂದಿಗೆ ಸಭೆ ಮುಕ್ತಾಯವಾಯಿತು.






**'ಹಸಿರೇ ಉಸಿರು'** – ಕುಂಸಿಯ ಶ್ರೀ ಮಂಜುನಾಥೇಶ್ವರ ಪ್ರೌಢಶಾಲೆಯಲ್ಲಿ ಗಿಡ ನೆಡುವ ಕಾರ್ಯಕ್ರಮ. ರೋಟರಿ ಅಧ್ಯಕ್ಷರಾದ ರೊ. ಕೆ.ಸೂರ್ಯನಾರಾಯಣ ಉಡುಪ ಹಾಗೂ ಕಾರ್ಯದರ್ಶಿ ರೊ. ಎನ್.ಜಿ. ಉಷಾ, ಮಾಜಿ ಅಧ್ಯಕ್ಷರಾದ ರೊ. ವೀರಣ್ಣ ಎ. ಹುಗ್ಗಿ, ರೊ. ಜಗದೀಶ್ ಕಾಮತ್, ರೊ. ಗಾಯತ್ರಿ ಸುಮತೀಂದ್ರ ಮತ್ತು ಶಾಲೆಯ ಶಿಕ್ಷಕರು ಹಾಗೂ ವಿದ್ಯಾರ್ಥಿ–ವಿದ್ಯಾರ್ಥಿನಿಯರು ಅತೀ ಉತ್ಸಾಹದಿಂದ ಭಾಗವಹಿಸಿದ್ದರು.

## ಗಮನಿಸಿ

**ಈ ವಾರದ ಸಭೆ ಕ್ಲಬ್ ಅಸೆಂಬ್ಲಿಯಲ್ಲಿ ನಮ್ಮ ಕ್ಲಬ್‌ನ ಕಮಿಟಿಯ ಚೇರ್ಮನ್‌ರವರುಗಳು ಈ ವರ್ಷದ ಕಾರ್ಯಕ್ರಮಗಳ ಬಗ್ಗೆ ತಮ್ಮ ವರದಿ ಆಕ್ಷನ್ ಪ್ಲಾನ್ ನೀಡಬೇಕೆಂದು ವಿನಂತಿಸುತ್ತೇವೆ.**

**ಈ ವಾರದ ಸಭೆಯಲ್ಲಿ ಜುಲೈನಲ್ಲಿ ಕ್ಲಬ್ ಶುಲ್ಕ ಪಾವತಿಸಿದ ಸದಸ್ಯರಿಗೆ ಗಿಫ್ಟ್ ನೀಡಲಾಗುವುದು.**

**– ರೊ. ಕೆ. ಸೂರ್ಯನಾರಾಯಣ ಉಡುಪ, ಅಧ್ಯಕ್ಷರು**

## ದಿನಾಂಕ 04.08.2024 ರಂದು ನೂತನ ಸದಸ್ಯರಿಗೆ ಮತ್ತಿತರ ನಮ್ಮ ಕ್ಲಬ್‌ನ ಸದಸ್ಯರಿಗೆ ಓರಿಯಂಟೇಶನ್ ಪ್ರೋಗ್ರಾಮ್







1st Orientation Programme held on 04th August, 2024 at Rotary Youth Centre at 9.00 am. Past Asst. Governor of R.I.Dist 3182 Rtn. Rajendra Prasad, participated as Chief Guest and Resource Person along with him Rtn. K.Sooryanaryana Udpa President of the club and Rtn.N.G.Usha, Secretary of the club were on the stage.

Initially, an invocation performed by Sri. G.Sathyanarayana. Rtn. Kishore Sheernaly Welcomed the gathered Rotarians. Rtn. Veeranna A. Huggi narrated purpose of the meeting. Introduction of the Chief Guest by Rtn. N.V.Bhat.

ರೊ. ರಾಜೇಂದ್ರ ಪ್ರಸಾದ್‌ರವರು ಮಾತನ್ನು ಆರಂಭಿಸುತ್ತಾ, ಕೆಲವೊಂದು ರೋಟರಿ ಕ್ಲಬ್‌ಗಳು ತನ್ನದೇ ಆದಂತಹ ರೀತಿ ನೀತಿ, ನಿಯಮಗಳನ್ನು ಅಳವಡಿಸಿಕೊಂಡಿವೆ. ಅದುವೇ ರೋಟರಿಯ ಸೌಂದರ್ಯವಾಗಿದೆ. ಅದನ್ನು ನೀವು ಗಮನಿಸಬೇಕಾದರೆ ಬೇರೆ ಬೇರೆ ಕ್ಲಬ್‌ಗಳಿಗೆ ನೀವು ಭೇಟಿ ನೀಡಬೇಕು. ಇತರ ರೋಟರಿ ಕ್ಲಬ್‌ಗಳಲ್ಲಿ ಬೇರೆ ಕಡೆಯಿಂದ ಬಂದಂತಹ ಅತಿಥಿ ರೋಟರಿ ಸದಸ್ಯರುಗಳಿಗೆ ಪ್ರಥಮ ಪ್ರಾಶಸ್ತ್ಯವನ್ನು ಕೊಡುತ್ತಾರೆ. ಬೆಂಗಳೂರಿನಲ್ಲಿ ಸುಮಾರು 60 ರೋಟರಿ ಕ್ಲಬ್‌ಗಳಿವೆ. ಅಲ್ಲಿ ನೀವು ಭೇಟಿ ನೀಡಿದರೆ ನಿಮಗೆ ನಿಮ್ಮ ಕ್ಲಬ್‌ನ ಬಗ್ಗೆ ವಿವರಿಸಲು 5 ನಿಮಿಷದ ಅವಕಾಶ ನೀಡುತ್ತಾರೆ. ಅಂತರರಾಷ್ಟ್ರೀಯ ರೋಟರಿ ಕ್ಲಬ್‌ಗಳಲ್ಲಿ 3 ನಿಮಿಷದ ಅವಕಾಶ ನೀಡುತ್ತಾರೆ. ಇವೆಲ್ಲವೂ ರೋಟರಿಯ ಸೌಂದರ್ಯಕ್ಕೆ ಕನ್ನಡಿಯಾಗಿದೆ ಎಂದರು. ರೋಟರಿ ಸದಸ್ಯರುಗಳು ಅಪ್‌ಡೇಟ್ ಆಗುತ್ತಲೇ ಇರಬೇಕು ಪ್ರತೀ ವರ್ಷರೋಟರಿಯಲ್ಲಿ ಬದಲಾವಣೆ ಸಹಜವಾಗಿದ್ದು, ನೀವು ಅಪ್‌ಡೇಟ್ ಆಗದಿದ್ದಲ್ಲಿ ನೀವು ಹಿಂದುಳಿಯುತ್ತೀರಿ ಎಂದರು. ಇಂದಿನ ಸಭೆಯು ನೂತನ ಸದಸ್ಯರುಗಳಿಗೆ ಮಾರ್ಗದರ್ಶನದ ಸಭೆಯಾಗಿದೆ ಎಂದು ತಿಳಿಸಿದರಲ್ಲದೇ, ನೂತನ ಸದಸ್ಯರುಗಳು ಸ್ವಪರಿಚಯ ಮಾಡಿಕೊಳ್ಳಲು ಅವಕಾಶ ಮಾಡಿದರು. ರೊ. ಎಸ್. ಮಂಜುನಾಥ್, ರೊ. ವಿ. ಶ್ರೀನಿವಾಸ, ರೊ. ಸಿ. ವಿಜಯಕುಮಾರ್, ರೊ. ಗಾಯತ್ರಿ ಸುಮತೀಂದ್ರ, ರೊ. ಪೇಟೆ ಅಜಯಕುಮಾರ್, ರೊ.ಜಗದೀಶ್ ಕಾಮತ್, ರೊ. ವಿ. ಸುನೀತಾ, ರೊ. ವನಿತಾ, ರೊ. ಶೋಭಾ, ರೊ. ವಾಗ್ದೇವಿ, ರೊ. ಸಂದೀಪ್ ಮುಂತಾದವರು ಇದರಲ್ಲಿ ಪಾಲ್ಗೊಂಡರು

ರೋಟರಿ ಸದಸ್ಯತ್ವಕ್ಕೆ ಅರ್ಜಿಯನ್ನು ಆಹ್ವಾನಿಸಲಾಗುವುದಿಲ್ಲ. ಆದರೆ ಈಗಿರುವ ಸದಸ್ಯರು ನೂತನ ಸದಸ್ಯತ್ವಕ್ಕೆ ಅವರುಗಳ ಹೆಸರುಗಳನ್ನು ಸೂಚಿಸಬಹುದು. ಅದು ಕಾರ್ಯಕಾರಿ ಮಂಡಳಿ ಸಭೆಯಲ್ಲಿ ತೀರ್ಮಾನವಾಗಿ ಸದಸ್ಯತ್ವ ಸಮಿತಿ, ಕ್ಲಾಸಿಫಿಕೇಷನ್ ಸಮಿತಿಯಲ್ಲಿ ಚರ್ಚೆಯಾಗಿ ಮುಂದುವರೆಯುತ್ತದೆ ಎಂದರು.

ರೋಟರಿ ಸದಸ್ಯರು ಹೇಗಿರಬೇಕು ಎಂಬುದನ್ನು ವಿವರಿಸಿದ ಅವರು I am available and dependable ಎಂಬಂತಿರಬೇಕು. ಇಲ್ಲಿ Fellowship, Friendship and Attendanceಗೆ ಮಹತ್ವವಿದೆ. ಪ್ರತಿಯೊಬ್ಬ ಸದಸ್ಯರಿಗೆ–ಅವರು ಸೂಚಿಸಿದ ಸದಸ್ಯರು ಜೊತೆಗಿದ್ದರೆ ಒಳ್ಳೆಯದು. ನೂತನ ಸದಸ್ಯರುಗಳು ಸಭೆಗಳಲ್ಲಿ ಪಾಲ್ಗೊಳ್ಳುವುದು ಮತ್ತು ಒಳಗೊಳ್ಳುವಿಕೆಯಿಂದ ಹೆಚ್ಚಿನ ಸ್ನೇಹತ್ವವನ್ನು ಗಳಿಸಿಕೊಳ್ಳಬಹುದಾಗಿದೆ. ಪಲ್ಸ್ ಪೋಲಿಯೋದಂತಹ ಕಾರ್ಯಕ್ರಮದಿಂದ–ವಿಶ್ವದಾದ್ಯಂತ ಪೋಲಿಯೋ ನಿರ್ಮೂಲನೆಯಲ್ಲಿ ಪ್ರಮುಖ ಪಾತ್ರವಹಿಸಿದ ರೋಟರಿಗೆ ಹಾಗೂ ರೋಟರಿ ಫೌಂಡೇಷನ್‌ಗೆ ಒಳ್ಳೆಯ ಹೆಸರು ಬಂದಿದೆ ಹಾಗೂ ಸಾರ್ವಜನಿಕರಲ್ಲಿ ಉತ್ತಮ ಅಭಿಪ್ರಾಯವನ್ನು ಕ್ರೋಡಿಕರಿಸಿದೆ ಎಂದರು.

ನಿಮಗೆ ಇಲ್ಲಿ ಗೌರವವಿದೆ, ನೀವು ಇಲ್ಲಿ ಹೆಸರನ್ನು ಗಳಿಸಬಹುದು, ಗೆಳೆತನ, ಸ್ನೇಹಮಿಲನವಿದೆ. ಇದರೊಂದಿಗೆಇದರ ಪ್ರಮುಖ ಉದ್ದೇಶವಾದ ಸಮಾಜ ಸೇವೆಯೂ ಇದೆ. ಇಲ್ಲಿ ಬೈಲಾವಿದೆ, ರೋಟರಿ ಸಂವಿಧಾನವಿದೆ. ಸ್ಟಾಂಡರ್ಡ್‌ಕ್ಲಬ್ ಬೈಲಾ ಇದೆ. ಎಲ್ಲವೂ ನೀವು ಬಳಸಿಕೊಳ್ಳುವುದರ ಮೇಲೆ ಪಾಲ್ಗೊಳ್ಳುವಿಕೆಯ ಮೇಲೆ ಇದೆ ಎಂದರು. ಪ್ರತಿಯೊಬ್ಬ ನೂತನ ಸದಸ್ಯರಿಗೆ ಅವರ ಅನುಭವಗಳನ್ನು ಕೇಳಿ ಮಾಹಿತಿ ಪಡೆದುಕೊಂಡರು. ಈ ಸಂದರ್ಭದಲ್ಲಿ ಮಾಜಿ ಸಹಾಯಕ ಗವರ್ನರ್ ರೊ ಟಿ.ಕೆ.ಎಂ.ಭಟ್‌ರವರು ಮಾತನಾಡಿ, ಸಮಯ ಪ್ರಜ್ಞೆಯನ್ನು ಬೆಳೆಸಿಕೊಂಡು ಸಮಯಕ್ಕೆ ಸರಿಯಾಗಿ ಕಾರ್ಯನಿರ್ವಹಿಸಿ ಎಂದು ಸಲಹೆ ನೀಡಿದರು. ಅಲ್ಲದೇ ಇಲ್ಲಿ ನಮ್ಮ ಬೆಳವಣಿಗೆಗೆ ವಿಫುಲವಾದ ಅವಕಾಶವಿದೆ ಎಂದರು. ಕೊನೆಯಲ್ಲಿ ರೊ.ಎನ್.ಜಿ.ಉಷಾರವರು ವಂದನಾರ್ಪಣೆ ಮಾಡಿದರು.

## ಇಂಟರ‍್ಯಾಕ್ಟ್ ಕ್ಲಬ್‌ಗಳ ಪದವಿ ಸ್ವೀಕಾರ ಸಮಾರಂಭ




1–8–2024 – ಜ್ಞಾನದೀಪ ಪ್ರೌಢಶಾಲೆ, ಜಾವಳ್ಳಿ



2–8–2024 – ಸರ್ಕಾರಿ ಪದವೀಪೂರ್ವ ಕಾಲೇಜ್, ಕುಂಸಿ



2–8–2024 – ಶ್ರೀ ಮಂಜುನಾಥೇಶ್ವರ ಹೈಸ್ಕೂಲ್, ಕುಂಸಿ



6–8–2024 – ಮೇರಿ ಇಮ್ಯಾಕ್ಯುಲೇಟ್ ಗರ್ಲ್ಸ್ ಹೈಸ್ಕೂಲ್, ಶಿವಮೊಗ್ಗ



## ಸಂಪಾದಕೀಯ

### ನಿಜವಾದ ನಾಯಕತ್ವ

ಇದು ಎಪಿಜೆ ಅಬ್ದುಲ್ ಕಲಾಮ್ ಅವರು ಒಂದು ಸಂದರ್ಶನದಲ್ಲಿ ವಿವರಿಸಿದ ನೈಜ ಘಟನೆ. 1979ರಲ್ಲಿ ಕಲಾಂರವರು ಇಸ್ರೊದಲ್ಲಿ ವಿಜ್ಞಾನಿಯಾಗಿದ್ದ ಸಂದರ್ಭ. ಆಗ ಇವರ ನೇತೃತ್ವದಲ್ಲಿ ಎಸ್‌ಎಲ್‌ವಿ 3 ರಾಕೆಟ್ ಅನ್ನು ಅಂತರಿಕ್ಷಕ್ಕೆ ಉಡಾವಣೆ ಮಾಡಲಾಗುತ್ತದೆ. ಆದರೆ ತಾಂತ್ರಿಕ ದೋಷದಿಂದ ರಾಕೆಟ್ ಬಂಗಾಳಕೊಲ್ಲಿಯಲ್ಲಿ ಪತನಗೊಳ್ಳುತ್ತದೆ. ಈ ಬಗ್ಗೆ ಪತ್ರಿಕಾಗೋಷ್ಠಿಯಲ್ಲಿ ವಿವರಣೆ ನೀಡುವ ಸಂದರ್ಭ ಬರುತ್ತದೆ. ಆಗ ಮಾಧ್ಯಮದವರು ದೇಶದ ದುಡ್ಡನ್ನು ವೃಥಾ ವ್ಯರ್ಥಮಾಡಿ ಬಂಗಳಾಕೊಲ್ಲಿಗೆ ಸುರಿದಿರಿ ಎಂದು ನಮ್ಮನು ಖಂಡಿತವಾಗಿಯೂ ದೂಷಿಸುತ್ತಾರೆ ಎಂಬ ಅಳುಕಿನಲ್ಲಿರುತ್ತಾರೆ ಕಲಾಂ.

ಆಗ ಇಸ್ರೊದ ಅಧ್ಯಕ್ಷರಾಗಿದ್ದ ಕ್ಯಾಪ್ಟನ್ ಸತೀಶ್ ಧವನ್ ಪತ್ರಿಕಾಗೋಷ್ಠಿಯನ್ನು 'ನಾನು ಎದುರಿಸುತ್ತೇನೆ' ಎಂದು ತಮ್ಮ ತಂಡದವರಿಗೆ ಧೈರ್ಯ ತುಂಬಿ ಮಾಧ್ಯಮದವರ ಮುಂದೆ ಅವರನ್ನು ಕರೆ ತರುತ್ತಾರೆ. ಹಾಗೂ ಅಲ್ಲಿ ಬರುವ ತೀಕ್ಷ್ಣ ಪ್ರಶ್ನೆಗಳಿಗೆ ಸಮರ್ಥವಾಗಿ ಉತ್ತರಿಸುತ್ತಾ, ತಮ್ಮ ವಿಜ್ಞಾನಿಗಳ ಕಾರ್ಯಕ್ಷಮತೆಯ ಕುರಿತು ಸಂಪೂರ್ಣ ವಿಶ್ವಾಸ ವ್ಯಕ್ತಪಡಿಸಿ ಅವರನ್ನು ಸಮರ್ಥಿಸಿಕೊಳ್ಳುತ್ತಾರೆ.

ಅಂತೆಯೇ 1980ರಲ್ಲಿ ಉಡಾವಣೆ ಯಶಸ್ವಿಯಾಗಿ ನೆರವೇರುತ್ತದೆ. ಈ ಬಾರಿ ಸತೀಶ್ ಧವನ್ ಅವರು ಅಬ್ದುಲ್ ಕಲಾಂ ಹಾಗೂ ಅವರ ತಂಡದ ಪ್ರಮುಖರನ್ನು ಕರೆದು 'ಈ ಬಾರಿ ಪತ್ರಿಕಾಗೋಷ್ಠಿಯನ್ನು ನೀವೇ ಎದುರಿಸಿ ಹಾಗೂ ನಮ್ಮ ಯಶಸ್ಸಿನ ವಿವರಗಳನ್ನು ಮಾಧ್ಯಮದವರಿಗೆ ನೀಡಿ' ಎನ್ನುತ್ತಾರೆ. ಇದೇ ಒಬ್ಬ ಶ್ರೇಷ್ಠ ನಾಯಕನ ಗುಣ ಎಂಬುದಾಗಿ ಅಬ್ದುಲ್ ಕಲಾಂ ಬಣ್ಣಿಸುತ್ತಾರೆ.

ಪರಿಣಾಮಕಾರಿ ನಾಯಕ ವೈಫಲ್ಯ ಎದುರಾದಾಗ ಅದನ್ನು ತನ್ನ ತಂಡದ ಸದಸ್ಯರ ಮೇಲೆ ಹೊರಿಸಿ ಪಲಾಯನ ಮಾಡದೇ, ಅದರ ಜವಾಬ್ದಾರಿಯನ್ನು ತಾನೇ ಹೊರುತ್ತಾನೆ. ಹಾಗೆಯೇ ಯಶಸ್ಸು ಸಿಕ್ಕಾಗ ಅದು ತನ್ನಿಂದ ಮಾತ್ರ ಲಭಿಸಿದ್ದು ಎಂಬ ಸ್ವಾರ್ಥ ಭಾವನೆಯಿಂದ ಯೋಚಿಸದೇ ಯಶಸ್ಸಿನ ಶ್ರೇಯವನ್ನು ತನ್ನ ಇಡೀ ತಂಡಕ್ಕೆ ಹಂಚುತ್ತಾನೆ. ನಾಯಕತ್ವವೆಂದರೆ ಅದು ಅಧಿಕಾರ ಹಾಗೂ ಅದರ ಬಲದಿಂದ ತನ್ನ ಕೈಕೆಳಗಿನವರನು ನಿಯಂತ್ರಣ ಮಾಡುವುದಕ್ಕೆ ಸೀಮಿತವಲ್ಲ. ಸೋಲು ಗೆಲುವುಗಳೆರಡಕ್ಕೂ ಸರಿ ಸಮಾನವಾಗಿ ಹೆಗಲೊಡ್ಡುವವನೇ ನಿಜವಾದ ನಾಯಕ.

• **ರೊ. ಎಂ. ಮಾಧವಾಚಾರ್**

### ಡಿಜಿ ಟಿಪ್ಸ್

ಅಂಡ್ರಾಯ್ಡ್ ಮೊಬೈಲ್‌ಗಳಲ್ಲಿ ಬಳಸುವ ಗೂಗಲ್ ಪ್ಲೇ (ಹಿಂದಿನ ಅಂಡ್ರಾಯ್ಡ್ ಮಾರ್ಕೆಟ್) ಗೂಗಲ್ ಅಭಿವೃದ್ಧಿಪಡಿಸಿದ ಅಂತರಾಷ್ಟ್ರೀಯ ಆನ್ ಲೈಫ್ ಸಾಫ್ಟ್‌ವೇರ್ ಸ್ಟೋರ್ಸ್ ಆಗಿದೆ. ಇದು ಅಕ್ಟೋಬರ್ 22,2008ರಲ್ಲಿ ಪ್ರಾರಂಭವಾಯಿತು. 1 ದಶಲಕ್ಷ ಅಪ್ಲಿಕೇಶನ್‌ಗಳನ್ನು ಗೂಗಲ್‌ಪ್ಲೇ ಸ್ಟೋರ್ ಮೂಲಕ 50 ಬಿಲಿಯನ್ ಜನರು ಡೌನ್ ಲೋಡ್ ಮಾಡಿದ್ದಾರೆ. ಫೆಬ್ರವರಿ 2015, ಅಂಕಿಅಂಶದ ಪ್ರಕಾರ ಲಭ್ಯವಿರುವ ಅಪ್ಲಿಕೇಶನ್‌ಗಳ ಸಂಖ್ಯೆ 1,4 ಮಿಲಿಯನ್ ಮೀರಿದೆ.


**ಆಪ್ ಸ್ಟೋರ್ (ಐಒಎಸ್)**

ಐಒಎಸ್ ಆಪಲ್‌ನ ಆಪ್‌ಸ್ಟೋರ್ ಜುಲೈ 10,2008 ರಂದು ಆರಂಭವಾಯಿತು. ಇದರ ಲಾಭಗಳ ಬಗ್ಗೆ ಹೇಳುವುದಾದರೆ ಇದನ್ನು ಬಳಸಲು ಬಹಳ ಸುಲಭ ಮತ್ತು ಅನುಕೂಲಕರವಾಗಿದೆ. ಒಂದು ಟಚ್‌ನಲ್ಲಿ ಆಪ್‌ಗಳನ್ನು ನಿಮ್ಮ ಮೊಬೈಲ್‌ನಲ್ಲಿ ಇನ್ಸ್ಟಾಲ್ ಮಾಡಿಕೊಳ್ಳಬಹುದು. ಈ ಆಪ್‌ಗಳು ಇನ್ಸ್ಟಾಲ್ ಆದಕೂಡಲೇ ನೀವು ನೀಡುವ ಅಧಿಸೂಚನೆಗಳನ್ನು ಸ್ವೀಕರಿಸುತ್ತದೆ. ಪ್ರತಿಕೂಲತೆ ಕಡಿಮೆ ಅಂದರೆ ಆರ್‌ಎಎಂ ಇರುವ ಮೊಬೈಲ್‌ಗಳಲ್ಲಿ ಕೆಲವೊಂದು ಅಪ್ಲಿಕೇಶನ್‌ಗಳು ರನ್ ಆಗುವುದಿಲ್ಲ. ಕೆಲವೊಮ್ಮೆ ಜಾಹೀರಾತು ಕಿರಿಕಿರಿ ಮಾಡುವುದೂ ಉಂಟು.

ಅಪ್ಲಿಕೇಶನ್‌ಗಳು ಬಳಕೆದಾರರ ವೈಯಕ್ತಿಕ ಮಾಹಿತಿ ತೆಗೆದುಕೊಂಡು, ಅದರ ದುರ್ಬಳಕೆ ಮಾಡುವ ಸಾಧ್ಯತೆ ಇದೆ. ನಿಮ್ಮ ಗಮನಕ್ಕೆ ಬಾರದೇ ವೈರಸ್‌ಗಳು ಆಪ್‌ಗಳ ಮೂಲಕ ಮೊಬೈಲ್ ಸಾಧನಗಳಲ್ಲಿ ಪ್ರವೇಶಿಸುವ ಸಾಧ್ಯತೆ ಇದೆ. ಆದ್ದರಿಂದ ಆಪ್‌ಗಳನ್ನು ನಿಮ್ಮ ಮೊಬೈಲ್‌ಗೆ ಇನ್ಸ್ಟಾಲ್ ಮಾಡಿಕೊಳ್ಳುವಾಗ ಉತ್ತಮ ಗುಣಮಟ್ಟದ ಅಪ್ಲಿಕೇಶನ್‌ಗಳನ್ನು ಆರಿಸಿ ಅದರ ಸ್ಟಾರ್ ರೇಟಿಂಗ್ ನೋಡಿ ಬಳಸುವುದು ಉತ್ತಮ.

– **ರೊ. ಎಂ. ಎನ್. ಎಸ್.ಮಣಿ**

### ಮುದ್ದುರಾಮನ ಪದಗಳು



**ನೂರೊಂದು ಭಾವದಲೆತೇಲುವುದು ಮನದೊಳಗೆ,**
**ಆಘಾತ ಅದರಿಂದ ಆಗಾಗ ನಮಗೆ**
**ಬೇಡದುದ ಹೊರ ಹಾಕಿ ಸುಂದರತೆಗಣಿಮಾಡು.**
**ಕಸದ ಬುಟ್ಟಿಯೆ ಮನಸು – ಮುದ್ದುರಾಮ**

**ಮನುಷ್ಯನ ಏಳಿಗೆಗೆ ಕೊನೆಯೆಲ್ಲಿ ?**

ಮನಸು ಬೆಳೆದಂತೆಲ್ಲ ಹಸಿವು ಬೆಳೆಯುವುದಯ್ಯ
ತಣಿಸಲದನೊಗೆಯುವುದು ಬಗೆ ಬಗೆಯಯುಕ್ತಿ।
ಮನುಜನೇಳಿಗೆಯದರಿನ; ಆ ಮನಸಿನೇಳಿಗೆಗೆ
ಕೊನೆಯೆಲ್ಲಿ ? ಚಿಂತಿಸೆಲೊ – ಮಂಕುತಿಮ್ಮ ॥

ಮನಸ್ಸು ಬೆಳೆದಂತೆಲ್ಲಾ ಹಸಿವು ಬೆಳೆಯುತ್ತದೆ. ಆ ಹಸಿವನ್ನು ತಣಿಸಲು ನಾನಾ ಯುಕ್ತಿಗಳನ್ನು ಅನುಸರಿಸುವುದು. ಅದರಿಂದ ಮನುಷ್ಯನ ಏಳಿಗೆ. ಆ ಮನಸ್ಸಿನ ಏಳಿಗೆಗೆ ಕೊನೆಯೆಲ್ಲಿ ಎಂಬುದನ್ನು ಚಿಂತಿಸು.

ಮನುಷ್ಯನ ನಾನಾ ರೀತಿಯ ಹಸಿವೆಯ ಮೂಲ ಅವನ ಮನಸ್ಸು. ಅದು ಬೆಳೆಯುತ್ತಾ ಸಾಗುತ್ತದೆ. ಮನಸ್ಸು ಬೆಳೆದಂತೆಲ್ಲಾ ಹಸಿವು ಬೆಳೆಯುತ್ತಾ ಹೋಗುತ್ತದೆ. ಸಣ್ಣ ಮಕ್ಕಳ ಉಡುಗೆಗಳಿಗೆ ಜೇಬುಗಳಿರುವುದಿಲ್ಲ. ಅವು ಬಯಸುವುದು ಹೊಟ್ಟೆ ತುಂಬುವಷ್ಟು ಆಹಾರ, ಮನ ಬಂದಂತೆ ಆಟ ಇಷ್ಟನ್ನೇ. ಮಕ್ಕಳ ಮನಸ್ಸು ಬೆಳೆದಿರುವುದಿಲ್ಲ. ಅಂತೆಯೆ ಅವುಗಳ ಹಸಿವೂ ಸೀಮಿತವಾಗಿರುತ್ತದೆ. ಮಕ್ಕಳು ಬೆಳೆದಂತೆ ಅವುಗಳ ಬಟ್ಟೆಗಳಿಗೆ ಜೇಬುಗಳು ಬರತೊಡಗುತ್ತವೆ. ತಮ್ಮ ಆಸೆಗಳನ್ನು ಈಡೇರಿಸಿಕೊಳ್ಳಲು ಜೇಬನ್ನು ತುಂಬತೊಡಗುತ್ತವೆ. ಈ ಜೇಬುಗಳೇ ಆಸೆಯ ಗೂಡುಗಳು. ಹೀಗೆ ಮನಸ್ಸು ಬೆಳೆಯುತ್ತಾ ಹೋದಂತೆಲ್ಲಾ ಅವನ ಹಸಿವು ಬೆಳೆಯ ತೊಡಗುತ್ತದೆ. ಆ ಹಸಿವೆಯನ್ನು ಪೂರೈಸಿಕೊಳ್ಳಲು ಬಗೆ ಬಗೆಯ ತಂತ್ರಗಳನ್ನು ಹೆಣೆಯತೊಡಗುತ್ತಾನೆ. ನಾನಾ ರೀತಿಯ ಯುಕ್ತಿಗಳನ್ನು ಬಳಸತೊಡಗುತ್ತಾನೆ. ಡಿ.ವಿ.ಜಿಯವರು ಮನುಷ್ಯನ ಏಳಿಗೆಯಿಂದ ಆ ಮನಸ್ಸಿನ ಏಳಿಗೆಗೆ ಕೊನೆ ಯಾವಾಗ ಚಿಂತಿಸು ಎಂಬುದಾಗಿ ನಮ್ಮನ್ನು ಇಲ್ಲಿ ಎಚ್ಚರಿಸಿದ್ದಾರೆ.

*(ಸಂಗ್ರಹ : ಜಿ. ಸತ್ಯನಾರಾಯಣ)*

**ಜುಲೈ ತಿಂಗಳಲ್ಲಿ ಶೇ 100% ಹಾಜರಾತಿ ದಾಖಲಿಸಿದ ಸದಸ್ಯರುಗಳು.**

| | |
|---|---|
| ರೊ. ಅನಿತಾ ಸೆಂಥಿಲ್‌ವೇಲನ್ | ರೊ. ಪೇಟೆ ಅಜಯಕುಮಾರ್ |
| ರೊ. ಟಿ.ಆರ್. ಅಶ್ವಥನಾರಾಯಣ್ | ರೊ. ಡಾ. ರಜನೀ ಪೈ |
| ರೊ. ಭಾರ್ಗವಿ ಭಟ್ | ರೊ. ರಾಕೇಶ್‌ಗೌಡ |
| ರೊ. ಗಾಯತ್ರಿ ಸುಮತೀಂದ್ರ | ರೊ. ರಮಾಗೋಪಾಲ್ |
| ರೊ. ಎಸ್. ಜಿ. ಗೋಪಾಲ್ | ರೊ. ರವೀ ಪಾಟೀಲ್ |
| ರೊ. ಗೋಪಾಲ ಕೃಷ್ಣ ಗುಪ್ತ | ರೊ. ಸಂದೀಪ್‌ಎಸ್. |
| ರೊ. ಜಗದೀಶ್‌ಕಾಮತ್ | ರೊ. ಸೂರ್ಯನಾರಾಯಣ ಉಡುಪ |
| ರೊ. ಕಿಶೋರ್ ಶೀರನಾಳಿ | ರೊ. ಎನ್. ಜಿ. ಉಷಾ |
| ರೊ. ಎಸ್. ಮಂಜುನಾಥ್ | ರೊ. ವೀರಣ್ಣ ಎ. ಹುಗ್ಗಿ |
| ರೊ. ಟಿ.ಕೆ. ಎಂ. ಭಟ್ | ರೊ. ಸಿ. ವಿಜಯಕುಮಾರ್ |
| ರೊ. ಎ. ಮಂಜುನಾಥ್ | ರೊ. ವಿ. ಶ್ರೀನಿವಾಸ್ |
| ರೊ. ಎನ್.ವಿ ಭಟ್ | ರೊ. ಡಿ.ಎಲ್. ಮಂಜುನಾಥ್ |

**ಚಿಂತನ...**

**ಸ್ನೇಹಿತರ ದಿನಾಚರಣೆ ನಾವೆಲ್ಲ ಆಚರಿಸಿದ್ದೇವಲ್ಲವೇ? ಸ್ನೇಹಿತರಿಗಾಗಿ ನೀವು ನೀಡುವ ಉತ್ತಮ ಉಡುಗೊರೆಯೆಂದರೆ ನಿಮ್ಮ ಸಮಯ ಮತ್ತುನಿಮ್ಮ ಸಹಾಯ. ಮತ್ತೊಬ್ಬರ ಒಳಿತಿಗಾಗಿ ಸಮಯ ನೀಡಿ ಸಹಕರಿಸುವುದು ಕೂಡ ಸೇವಾಮನೋಭಾವವೇ ಅಲ್ಲವೇ?**

**– ರೊ. ಎನ್.ಜಿ. ಉಷಾ**

To, *Book Post*